**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಇವರು ನಿಯಮ-330 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:-**

ಕೊಪ್ಪಳ ನಗರದ ಹೃದಯಭಾಗದಲ್ಲಿರುವ ಐತಿಹಾಸಿಕ ಹಾಗೂ ಪೌರಾಣಿಕ ಮಹತ್ವವುಳ್ಳ ಸುಮಾರು 81 ಎಕರೆ ವಿಸ್ತೀರ್ಣ ಹುಲಿಕೆರೆಯ ಕೆಲವು ಭಾಗಗಳಲ್ಲಿ ಅನಧಿಕೃತವಾಗಿ ಮನೆಗಳು, ಕಟ್ಟಡಗಳು ಹಾಗೂ ಇತರೆ ನಿರ್ಮಾಣಗಳನ್ನು ಮಾಡಿರುವ ಕುರಿತು ಈ ಸದನದಲ್ಲಿ ಈ ಹಿಂದೆ ಚರ್ಚೆನಡೆದ ಸಂದರ್ಭದಲ್ಲಿ ಮಾನ್ಯ ಸಂಬಂಧಪಟ್ಟ ಸಚಿವರು ಒಂದು ತಿಂಗಳೊಳಗಾಗಿ ಅಗತ್ಯ ಕ್ರಮ ಕೈಗೊಂಡು ಹುಲಿಕೆರೆಯಲ್ಲಿನ ಅನಧಿಕೃತ ಅತಿಕ್ರಮಣಗಳನ್ನು ತೆರವುಗೊಳಿಸಲಾಗುವುದು ಎಂದು ಸದನಕ್ಕೆ ಆಶ್ವಾಸನೆ ನೀಡಿದ್ದರು. ಆದರೆ ಸದರಿ ಒಂದು ತಿಂಗಳ ಅವಧಿ ಮುಕ್ತಾಯವಾಗಿ ಈಗಾಗಲೇ 2-3 ತಿಂಗಳು ಕಳೆದಿದ್ದರೂ ಸಹ ಕೊಪ್ಪಳ ನಗರ ಹುಲಿಕೆರೆಯಲ್ಲಿರುವ ಅನಧಿಕೃತ ಅತಿಕ್ರಮಣಗಳನ್ನು ತೆರವುಗೊಳಿಸಲು ಇದುವರೆಗೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿರುವುದಿಲ್ಲ. ಸದನಕ್ಕೆ ನೀಡಿದ ಆಶ್ವಾಸನೆಯಂತೆ ನಿಗದಿತ ಅವಧಿಯಲ್ಲಿ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು, ಈವರೆಗೆ ಜಿಲ್ಲಾಡಳಿತ, ನಗರಸಭೆ ಹಾಗೂ ಸಂಬಂಧಪಟ್ಟ ಇಲಾಖೆಗಳು ಕೈಗೊಂಡಿರುವ ಕ್ರಮಗಳೇನು, ಹುಲಿಕೆರೆಯ ಸಂಪೂರ್ಣ ಪ್ರದೇಶ ಹಾಗೂ ಅದರ ಬಫರ್ ವಲಯವನ್ನು ಮರು ಸರ್ವೇಮಾಡಿ ನಿಖರ ಗಡಿ ಗುರುತಿಸಿ, ಅನಧಿಕೃತ ಅತಿಕ್ರಮಣಗಳನ್ನು ತೆರವುಗೊಳಿಸಲು ಸರ್ಕಾರವು ಕಾಲಮಿತಿ ನಿಗದಿಪಡಿಸಿ ತಕ್ಷಣ ಕ್ರಮಕೈಗೊಳ್ಳುವುದೇ ಹಾಗೂ ಈ ಕುರಿತು ಕೈಗೊಂಡ ಕ್ರಮದ ಸಮಗ್ರ ವರದಿಯನ್ನು ಸದನಕ್ಕೆ ಸಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಹುಲಿಕೆರೆ ಅತಿಕ್ರಮಣ ತೆರವುಗೊಳಿಸುವ ಕುರಿತು ಸದನದಲ್ಲಿ ನೀಡಿದ ಆಶ್ವಾಸನೆ ಅನುಷ್ಠಾನಗೊಳ್ಳದಿರುವ ಬಗ್ಗೆ.

**ಉತ್ತರ:-**

ಕೊಪ್ಪಳ ನಗರದ ಹೃದಯ ಭಾಗದಲ್ಲಿರುವ ಹುಲಿಕೆರೆಯ ಭಾಗಗಳಲ್ಲಿ ಅನಧಿಕೃತವಾಗಿ ಮನೆಗಳು, ಕಟ್ಟಡಗಳು ಹಾಗೂ ಇತರೆ ನಿರ್ಮಾಣಗಳನ್ನು ತೆರವುಗೊಳಿಸಲು ಜಿಲ್ಲಾಡಳಿತ ನಗರಸಭೆ ಹಾಗೂ ಸಂಬಂಧಪಟ್ಟ ಇಲಾಖೆಗಳು ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ:

1) ಕೊಪ್ಪಳ ಗ್ರಾಮದ ರಿ.ಸ.ನಂ.621ರ ಹುಲಿಕೆರೆಯ ಅಳತೆ ಕಾರ್ಯವನ್ನು ಕೈಗೊಳ್ಳಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕೊಪ್ಪಳ ಇವರು ಭೂಮಾಪಕರನ್ನು ನಿಯೋಜಿಸಿ ಭೂ ಅಳತೆ ಕಾರ್ಯವನ್ನು ಕೈಗೊಂಡು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಂತೆ ಸರ್ವೆ ನಂಬರ್: 621 ರಲ್ಲಿ ಪಹಣಿ ಕ್ಷೇತ್ರ 67.4 (ಎ.ಗುಂಟೆ) ಹುಲಿಕೆರೆ ಎಂದು ಇದ್ದು, 0.15 (ಎ-ಗುಂಟೆ) ದರ್ಗಾ ಮತ್ತು 0-11 (ಎ.ಗುಂಟೆ) ಕ್ಷೇತ್ರದ ಜಾಗ, ಆಂಜನೇಯ ಮೂರ್ತಿ, ಯಜ್ಞಮಂಟಪ, ಭಾವಿ ಕಟ್ಟಡ ಮತ್ತು ಶೆಡ್‌ಗಳು ಇರುತ್ತವೆ. ಸರ್ವೆ ನಂಬರ್:622 ರ ಪಹಣಿ ಕ್ಷೇತ್ರ 19-10 (ಎ-ಗುಂ) ಪೈಕಿ 14.25 (ಎ-ಗುಂ) ಹುಲಿಕೆರೆ ಮತ್ತು 3-0 (ಎ-ಗುಂ) ಕ್ಷೇತ್ರ ಜಿಲ್ಲಾ ಪೊಲೀಸ್ ಅಧೀಕ್ಷಕರು ಕೊಪ್ಪಳ ಇವರ ಹೆಸರಿನಲ್ಲಿ ಇದ್ದು, ಜಾಲಿ ಕಂಟಿ ಇರುತ್ತದೆ. ಮತ್ತು ಸರ್ವೆ ನಂಬರ್: 623 ರಲ್ಲಿ ಪಹಣಿ ಪ್ರಕಾರ ಹುಲಿಕೇರಿ ಎಂದು ಇದ್ದು, ಒಟ್ಟು ಕ್ಷೇತ್ರ 25.0 (ಎ-ಗುಂ) ಇರುತ್ತದೆ.
2) ಸದರಿ ಪ್ರದೇಶದಲ್ಲಿ ಹಜರತ್ ಗುಲಾಬಶಾ ವಲಿ ದರ್ಗಾದವರು ಒಟ್ಟು 0-15 ಗುಂಟೆ ಜಮೀನನ್ನು ಹಾಗೂ ಶ್ರೀ ಶಿವರಾತ್ರೇಶ್ವರ ದೇವಸ್ಥಾನದವರು 0-11 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದಾಗಿ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ.
3) ಒತ್ತುವರಿಯಾಗಿರುವ ಹುಲಿಕೆರೆಯ ಜಮೀನನ್ನು ತೆರವುಗೊಳಿಸುವಂತೆ, ನಗರಸಭೆವತಿಯಿಂದ ನೋಟಿಸ್ ಸಂಖ್ಯೆ: ಕೊನಸ/ಹುಲಿಕೆರೆ ಒತ್ತುವರಿ 2025-26/242 ಹಾಗೂ 243 ದೇವಸ್ಥಾನದ ಕಮಿಟಿ ಹಾಗೂ ದರ್ಗಾ ಕಮಿಟಿಗೆ ದಿನಾಂಕ:15-05-2026ರಂದು ನೋಟಿಸ್ ಜಾರಿಗೊಳಿಸಲಾಗಿರುತ್ತದೆ.

4) ಶ್ರೀ ಶಿವರಾತ್ರೇಶ್ವರ ದೇವಸ್ಥಾನ ಸಮಿತಿಯವರು ಸ್ವಯಂ ಪ್ರೇರಿತವಾಗಿ ಕೆರೆಯ ಆವರಣದಲ್ಲಿದ್ದ ಯಜ್ಞಕುಂಡ, ಅಡುಗೆ ಮನೆ ಇತರೇ ಕಟ್ಟಡಗಳನ್ನು ತೆರವುಗೊಳಿಸಿಕೊಂಡಿರುತ್ತಾರೆ.

5) ಆದರೆ ಹಜರತ್ ಗುಲಾಬಶಾವಲಿ ದರ್ಗಾ (ಸುನ್ನಿ) ರವರು ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ಡಬ್ಲ್ಯೂ.ಪಿ ನಂ.104323/2026 (ಎಲ್.ಬಿ-ಯು.ಸಿ) ಪ್ರಕರಣ ದಾಖಲಿಸಿ ದಿನಾಂಕ: 26-05-2026 ರಂದು ನಗರಸಭೆವತಿಯಿಂದ ನೀಡಿದ ನೋಟಿಸಿಗೆ ತಡೆಯಾಜ್ಞೆಯನ್ನು ತಂದಿರುತ್ತಾರೆ. ಸದರಿ ವಿಷಯವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥತಕ್ಕೆ ಬಾಕಿ ಇರುವುದರಿಂದ ಮಾನ್ಯ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಲು ಈಗಾಗಲೇ ನಗರಸಭೆವತಿಯಿಂದ ಆಕ್ಷೇಪಣೆ ಸಲ್ಲಿಸಿ ತಡೆಯಾಜ್ಞೆ ತೆರವುಗೊಳಿಸಲು ಕ್ರಮವಹಿಸಲಾಗಿರುತ್ತದೆ. ಸದರಿ ಪ್ರಕರಣದ ವಿಚಾರಣೆಯು ಮಾನ್ಯ ನ್ಯಾಯಪೀಠದಲ್ಲಿ ದಿನಾಂಕ:06-10-2026ಕ್ಕೆ ಮುಂದೂಡಲ್ಪಟ್ಟಿರುತ್ತದೆ.

6) ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ ರವರ ಆದೇಶ ಸಂಖ್ಯೆ: ಸಂ/ಕಂ/ಭೂಮಿ/85/ಕಂ.ಸಂ-2040/2011-12, ದಿನಾಂಕ: 17.05.2013ರಲ್ಲಿ ಕೊಪ್ಪಳ ತಾಲ್ಲೂಕಿನ ಕೊಪ್ಪಳ ನಗರದ ಸ. ನಂ: 622/*/*ರಲ್ಲಿ ಕ್ಷೇತ್ರ 03-00 ಎಕರೆ, ಸ.ನಂ: 624/*/*ರಲ್ಲಿ ಕ್ಷೇತ್ರ 17-09 ಎಕರೆ, ಸ.ನಂ 625/*/*ರಲ್ಲಿ ಕ್ಷೇತ್ರ 10-05 ಎಕರೆ ಒಟ್ಟು 30-14 ಎಕರೆ ಜಮೀನನ್ನು ಜಿಲ್ಲಾ ಸಶಸ್ತ್ರ ಮೀಸಲು ಪಡೆಗಾಗಿ, ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೊಪ್ಪಳ ಇವರ ಹೆಸರಿಗೆ ಕಾಯ್ದಿರಿಸಿ ಆದೇಶಿಸಲಾಗಿರುತ್ತದೆ.

7) ತಹಶಿಲ್ದಾರರು, ಕೊಪ್ಪಳ ತಾಲ್ಲೂಕು ಇವರ ಪತ್ರ ಸಂಖ್ಯೆ: ಸಂ/ಕಂ/CoNo: 476438/TOKPL-LND0US21/168/2026-LND, ದಿನಾಂಕ: 21.05.2026ರಲ್ಲಿ ಕೊಪ್ಪಳ ನಗರದ ಸ.ನಂ 622, 624, 625ರ ಜಮೀನುಗಳು 1973-74, 1979-80, 1988-89, 1993-94ನೇ ಸಾಲಿನಲ್ಲಿ ಪಹಣಿ ಕಾಲಂ 09ರಲ್ಲಿ ಹುಲಿಕೇರಿ ಕೆರೆ ಎಂದು ನಮೂದಾಗಿರುತ್ತದೆ. ಸದರಿ ಸರ್ವೆ ನಂಬರ ಮೂಲತಃ ಕೆರೆ ಜಮೀನುಗಳಾಗಿರುತ್ತವೆ. ಕಾರಣ ಜಿಲ್ಲಾ ಪೋಲೀಸ್ ಅಧೀಕ್ಷಕರು ಕೊಪ್ಪಳ-ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕೊಪ್ಪಳ ಇವರಿಗೆ ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಆದೇಶ ಸಂ/ಕಂ/ಭೂಮಿ/65/ಕಂ.ಸಂ 2040/2011-12, ದಿನಾಂಕ: 17.05.2013ರ ಆದೇಶದಂತೆ ಸ. ನಂ 622/*/* ರಲ್ಲಿ ಕ್ಷೇತ್ರ 3-00 ಎಕರೆ, ಸ ನಂ 624/*/* ರಲ್ಲಿ ಕ್ಷೇತ್ರ 17-09 ಎಕರೆ, ಸ ನಂ. 625/*/* ರಲ್ಲಿ ಕ್ಷೇತ್ರ 10-05 ಎಕರೆ ಜಮೀನು ಮಂಜೂರು ಮಾಡಿರುವುದನ್ನು ರದ್ದುಪಡಿಸಿ, ಪುನಃ ಪಹಣಿ ಕಾಲಂ 09 ರಲ್ಲಿ ಹುಲಿಕೇರಿ ಕೆರೆ ಎಂದು ನಮೂದಿಸಲು ಕೋರಿರುತ್ತಾರೆ.

8) ಅದರಂತೆ, ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ ಇವರ ಆದೇಶ ಸಂಖ್ಯೆ: ಗ. ಸಂ: 476438 TOKPL-LND0US21/168/2026, ದಿನಾಂಕ: 05.06.2026ರಲ್ಲಿ ಅಂಶ (6) ರಲ್ಲಿ ಪ್ರಸ್ತಾಪಿಸಿರುವ ದಿನಾಂಕ: 17.05.2013ರ ಆದೇಶವನ್ನು ಹಿಂಪಡೆದು ಹುಲಿಕೆರೆಗೆ ಸೇರಿದ ಒಟ್ಟು 34-14 ಎಕರೆ ಜಮೀನಿನ ಪಹಣಿ ಕಲಾಂ ನಂ. 9ರಲ್ಲಿ ಪುನಃ ಹುಲಿಕೆರೆ ಎಂದು ನಮೂದಿಸಲು ಆದೇಶಿಸಲಾಗಿದೆ.

ಕೊಪ್ಪಳ ನಗರದ ಹೃದಯ ಭಾಗದಲ್ಲಿರುವ ಹುಲಿಕೆರೆಯ ಒತ್ತುವರಿಯಲ್ಲಿ ಭಾಗಶಃ ಒತ್ತುವರಿಯನ್ನು ಈಗಾಗಲೇ ತೆರವುಗೊಳಿಸಲಾಗಿದ್ದು ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ಡಬ್ಲ್ಯೂ.ಪಿ ನಂ.104323/2026 (ಎಲ್.ಬಿ-ಯು.ಸಿ)ರ ಪ್ರಕರಣವು ಪ್ರಸ್ತುತ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ, ಘನ ನ್ಯಾಯಾಲಯದ ಮುಂದಿನ ಆದೇಶದಂತೆ ಕ್ರಮ ವಹಿಸಲಾಗುತ್ತದೆ.

ಸಂಖ್ಯೆ: ನಅಇ 235 ಜಿಇಎಲ್ 2026 (ಇ)

(ಹೆಚ್. ಸಿ. ಬಾಲಕೃಷ್ಣ)
ಪೌರಾಡಳಿತ ಸಚಿವರು.